


ದಂಡಕಾರಣ್ಯದಲ್ಲಿ ಒಂದು ಬೆಕ್ಕು ವಾಸವಾಗಿತ್ತು. ಅದಕ್ಕೆ ಒಂದು ನಾಯಿ ಸ್ನೇಹಿತನಾಗಿತ್ತು. ಬೆಕ್ಕು ನಾಯಿಯನ್ನು, ನಾಯಿ ಬೆಕ್ಕನ್ನು ಬಿಟ್ಟು ಅಗಲುತ್ತಿರಲಿಲ್ಲ. ಬೆಕ್ಕು ಅಂಜುಬುರುಕನಾದರೂ ಬಹಳ ಉಪಾಯಗಾರ. ಆದರೆ ನಾಯಿ ಅಹಂಕಾರಿ ಮತ್ತು ಹೆಚ್ಚು ಮಾತಾಡುವ ಸ್ವಭಾವದ್ದಾಗಿತ್ತು.

ಒಂದು ದಿನ ಇಬ್ಬರಲ್ಲಿ ಚರ್ಚೆ ಪ್ರಾರಂಭವಾಯಿತು. ನಾಯಿ ತನಗೆ ಗೊತ್ತಿರುವ ಅನೇಕ ಚಾತುರ್ಯಗಳ ಬಗ್ಗೆ ಹೇಳುತ್ತಾ ತನಗೆ ಬೇಟೆಗಾರರಿಂದ ತಪ್ಪಿಸಿಕೊಳ್ಳುವ ನೂರು ಉಪಾಯಗಳು ಗೊತ್ತಿರುವುದಾಗಿ ಹೆಮ್ಮೆಯಿಂದ ಹೇಳಿತು. ಆಗ ಬೆಕ್ಕು 'ನನಗೆ ಯಾವ ಉಪಾಯಗಳೂ ಗೊತ್ತಿಲ್ಲ. ಬೇಟೆಗಾರರಿಂದ ತಪ್ಪಿಸಿಕೊಳ್ಳಲು ನೀನು ಬಲ್ಲ ಒಂದು ಉಪಾಯವನ್ನಾದರೂ ನನಗೆ ಕಲಿಸಿಕೊಡು' ಎಂದು ನಾಯಿಯನ್ನು ಕೇಳಿತು.

'ಮಾಡಲು ಬೇರೇನೂ ಕೆಲಸವಿಲ್ಲದಿದ್ದಾಗ ಕಲಿಸಿ ಕೊಡುತ್ತೇನೆ' ಎಂದಿತು ನಾಯಿ.

'ಬೇಟೆಗಾರರು ನಮ್ಮನ್ನು ಕೊಂದು ತಿನ್ನುತ್ತಾರೆ. ನಾವಿಬ್ಬರೂ ಬಹಳ ಎಚ್ಚರಿಕೆಯಿಂದ ಇರಬೇಕು' ಎಂದು ಬೆಕ್ಕು ಹೇಳಿದರೆ, ನಾಯಿ 'ನಿನಗೆ ಗೊತ್ತೇನು, ಅವರು ನಮ್ಮನ್ನು ಹಿಡಿದು ಸರಪಳಿ ಹಾಕುತ್ತಾರೆ. ನಾವು ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಕಾವಲು ಕಾಯಬೇಕಾಗುತ್ತದೆ' ಎಂದಿತು.

ಅಷ್ಟರಲ್ಲಿ ಹಠಾತ್ತನೆ ಹೆಜ್ಜೆ ಸಪ್ಪಳ ಕೇಳಿ ಬಂತು. ಬೆಕ್ಕು ಹತ್ತಿರದ ದಿಣ್ಣೆ ಹತ್ತಿ ನೋಡಿದರೆ ಬೇಟೆಗಾರರ ಗುಂಪು ಬರುತ್ತಿತ್ತು. ಅವರು ಉದ್ದವಾದ ಭಲ್ಲೆಗಳನ್ನು, ಬಲೆಗಳನ್ನು ತರುತ್ತಿದ್ದರು.

ತಕ್ಷಣ ಕೆಳಗೆ ಧುಮುಕಿದ ಬೆಕ್ಕು ನಾಯಿಗೆ 'ಮಿತ್ರಾ ಓಡು, ಪ್ರಾಣ ಉಳಿಸಿಕೊ, ಬೇಟೆಗಾರರು ಬರುತ್ತಿದ್ದಾರೆ' ಎಂದು ಹೆದರಿಕೆಯಿಂದ ಹೇಳಿತು. 'ನೀನೇನು ಮಾಡುತ್ತೀ?' ಎಂದು ನಾಯಿ ಭಯದಿಂದ ಕೇಳಿತು. 'ನನ್ನ ಬಗ್ಗೆ ಚಿಂತಿಸಬೇಡ. ನನಗೆ ಗೊತ್ತಿರುವ ಒಂದೇ ಒಂದು ಉಪಾಯದಿಂದ ನನ್ನನ್ನು ರಕ್ಷಿಸಿಕೊಳ್ಳುತ್ತೇನೆ' ಎಂದು ಹೇಳಿದ ಬೆಕ್ಕು ಮರ ಹತ್ತಿ ಎಲೆಗಳ ನಡುವೆ ಮರೆಯಾಯಿತು.

ನಾಯಿ ಕಾಲಿಗೆ ಬುದ್ಧಿ ಹೇಳಿತು. ಬೇಟೆಗಾರರು ಅದನ್ನು ಹಿಂಬಾಲಿಸಿ ಹಿಡಿದು ಬಲೆಗೆ ಬೀಳಿಸಿದರು. ತನ್ನನ್ನು ಕೊಂದುಬಿಡುವರೆಂಬ ಭಯದಿಂದ ಬೆಕ್ಕು ಒಂದಿಷ್ಟೂ ಅಲುಗಾಡದೆ ಸುಮ್ಮನೆ ಕುಳಿತುಕೊಂಡಿತು. ಬೇಟೆಗಾರರು ನಾಯಿಯನ್ನು ಹಿಡಿದು ಕರೆದೊಯ್ದರು.

ಹಲವು ದಿನಗಳು ಕಳೆದವು. ನಾಯಿಯ ಸುಳಿವು ಕಾಣಲಿಲ್ಲ. ಒಂದು ದಿನ ಕುತ್ತಿಗೆ ಪಟ್ಟಿ ಕಟ್ಟಿಕೊಂಡ ನಾಯಿ ಕಾಡಿಗೆ ಹಿಂತಿರುಗಿತು. ಬೆಕ್ಕನ್ನು ನೋಡಿ 'ಮರ ಹತ್ತುವ ಚಾತುರ್ಯ ನನಗೆ ಕಲಿಸಿ ಕೊಡುತ್ತೀಯಾ? ನೀನು ಅದನ್ನು ನನಗೆ ಮೊದಲೇ ಕಲಿಸಿದ್ದರೆ, ನನ್ನನ್ನು ನಾನು ರಕ್ಷಿಸಿಕೊಳ್ಳಬಹುದಾಗಿತ್ತು. ಈಗಲೂ ತಡವೇನೂ ಆಗಿಲ್ಲಾ. ನಾನು ಬೇಟೆಗಾರರಿಂದ ತಪ್ಪಿಸಿಕೊಂಡಿದ್ದೇನೆ. ದಯವಿಟ್ಟು ಮರ ಏರುವುದನ್ನು ಕಲಿಸು' ಎಂದು ಬೇಡಿಕೊಂಡಿತು.

'ಇಲ್ಲ, ಸಾಧ್ಯವಿಲ್ಲ' ಎಂದು ಬೆಕ್ಕು ನಿರಾಕರಿಸಿತು.

ನಾಯಿ 'ಹಾಗೆ ನಿರಾಕರಿಸಬೇಡ ಗೆಳೆಯ' ಎಂದಿತು. ಅದಕ್ಕೆ ಬೆಕ್ಕು 'ನಿನಗೆ ಮರ ಹತ್ತುವುದನ್ನು ಕಲಿಸಿಕೊಟ್ಟರೆ ನೀನೂ ನನ್ನೊಂದಿಗೆ ಮರ ಹತ್ತುತ್ತಿ. ಬೇಟೆಗಾರರನ್ನು ಕಂಡು ಬೊಗಳುತ್ತಿ. ಬೊಗಳಿದಾಗ ನಿನ್ನೊಡನೆ ನನ್ನನ್ನೂ ಸಿಕ್ಕಿಸುತ್ತಿ. ನೀನು ನನ್ನ ಜೊತೆಗಿದ್ದರೆ ನನಗೂ ರಕ್ಷಣೆ ಇರುವುದಿಲ್ಲ' ಎಂದು ಹೇಳಿತು.

ಇದರಿಂದ ಕೋಪಗೊಂಡ ನಾಯಿ ಬೆಕ್ಕನ್ನು ಕೊಲ್ಲಲೆಂದು ನೆಗೆಯಿತು. ಆದರೆ ಬೆಕ್ಕು ನಾಯಿಯಿಂದ ತಪ್ಪಿಸಿಕೊಂಡು ಮರ ಹತ್ತಿತು.

ಆಗ ನಾಯಿ 'ಹೇಗಾದರೂ ಮಾಡಿ ನಾನು ಮರ ಹತ್ತುವುದನ್ನು ಕಲಿತೇ ಕಲಿಯುತ್ತೇನೆ. ಅದನ್ನು ಕಲಿಯಲು ನಿನ್ನ ಮಲವನ್ನು ತಿನ್ನಲೂ ನಾನು ಹೇಸುವುದಿಲ್ಲ' ಎಂದು ಸವಾಲು ಹಾಕಿತು.

ಈಗಲೂ ಮರ ಹತ್ತುವುದನ್ನು ನಾಯಿ ಕಲಿತುಕೊಳ್ಳಬಹುದೆಂಬ ಭಯದಿಂದ ಬೆಕ್ಕು ಒಂದು ಗುಳಿ ತೋಡಿ ಅದರಲ್ಲಿ ಮಲವಿಸರ್ಜನೆ ಮಾಡಿ ಅದರ ಮೇಲೆ ಮಣ್ಣನ್ನು ಎಳೆದು ಮುಚ್ಚುತ್ತದೆ.

**–ಶ್ರೀಕಾಂತ ಹಾದಿಮನಿ, ಶಿರಹಟ್ಟಿ**